ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

ವಿಷಯ:- ಸುಜಲ-III ಯೋಜನೆಯ ನಿರ್ಗಮನ (Exit Strategy) ಕಾರ್ಯಕ್ರಮದಡಿ ಗ್ರಾಮ ಮಟ್ಟದ ತರಬೇತಿ ವೆಚ್ಚಗಳನ್ನು ಭರಿಸಲು ಯೋಜನಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: AGRI-AML/103/2019, ಬೆಂಗಳೂರು, ದಿನಾಂಕ:31.12.2019
2. ಸರ್ಕಾರದ ಆದೇಶ ಸಂಖ್ಯೆ: AGRI-AML/89/2020, ಬೆಂಗಳೂರು, ದಿನಾಂಕ:14.08.2020
3. ಸರ್ಕಾರದ ಆದೇಶ ಸಂಖ್ಯೆ: AGRI-AML-109/2020(P-1) ಬೆಂಗಳೂರು, ದಿನಾಂಕ:14.08.202
4. ಈ ಕಛೇರಿ ಸುತ್ತೋಲೆ ಸಂ.ಜ.ಅ.ಇ./ಉಕೃನಿ/ಸುಜಲ/ನಿ.ಕಾ/ಯೋಜಿ.ವ್ಯ./2020-21 ದಿನಾಂಕ:16.09.2020

ಪೀಠಿಕೆ:-

ಸುಜಲ-III ಯೋಜನಾ ನಂತರದ ಅವಧಿಯಲ್ಲಿ ಜನವರಿ 2020 ರಿಂದ ಡಿಸೆಂಬರ್ 2024 ರವರೆಗೆ ಸುಜಲ-III ನಿರ್ಗಮನ (Exit Strategy) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ದಿನಾಂಕ: 07.11.2019 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಕರ್ನಾಟಕ ಸರ್ಕಾರ, ರವರ ಅಧ್ಯಕ್ಷತೆಯಲ್ಲಿ ನಡೆದ 14ನೇ Project Empowered Committee (PEC) ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಉಲ್ಲೇಖ(1&2)ರ ಸರ್ಕಾರದ ಆದೇಶಗಳಲ್ಲಿ ಸದರಿ ಕಾರ್ಯಕ್ರಮಕ್ಕೆ ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದ್ದು, ಅನುಷ್ಠಾನ ಮಾಡಲು ಅನುಮೋದನೆ ನೀಡಲಾಗಿರುತ್ತದೆ.

2020-21ನೇ ಸಾಲಿನ ಆಯವ್ಯಯದಲ್ಲಿ ಸುಜಲ-III ಯೋಜನೆಯ ನಿರ್ಗಮನ (Exit Strategy) ಕಾರ್ಯಕ್ರಮದಡಿ ಲೆಕ್ಕ ಶೀರ್ಷಿಕೆ:2402-00-102-0-31 ರಡಿ ಜಲಾನಯನ ಅಭಿವೃದ್ಧಿ ಇಲಾಖೆಗೆ ರೂ.986.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದ್ದು, ಉಲ್ಲೇಖ(3)ರ ಸರ್ಕಾರದ ಆದೇಶದಂತೆ ಮೊದಲ ತ್ರೈಮಾಸಿಕಕ್ಕೆ ರೂ.246.50 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಸುಜಲ-III ಯೋಜನೆಯ ಮಾದರಿಯಲ್ಲಿ Exit Strategy ಕಾರ್ಯಕ್ರಮದಡಿ 2020-21ನೇ ಸಾಲಿನಲ್ಲಿ ಯೋಜನಾ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಭೂಸಂಪನ್ಮೂಲ (LRI) ಶಿಫಾರಸ್ಸುಗಳ ಅಳವಡಿಕೆ ಕುರಿತು ರೈತರಿಗೆ ಸಂಬಂಧಿತ ರೈತ ಸಂಪರ್ಕ ಕೇಂದ್ರಗಳ ಮೂಲಕ ಒಂದು ದಿನದ ಗ್ರಾಮ ಮಟ್ಟದ ತರಬೇತಿಗಳನ್ನು ಉಲ್ಲೇಖ(4)ರಲ್ಲಿ ನೀಡಿದ ಮಾರ್ಗಸೂಚಿ ಅನುಸಾರ ಪ್ರತಿ ತರಬೇತಿಗೆ ಗರಿಷ್ಠ ರೂ.10,000/- ವೆಚ್ಚ ಮಿತಿಯಲ್ಲಿ ಆಯೋಜಿಸಲು ಯೋಜಿಸಲಾಗಿರುತ್ತದೆ. ಈ ಸಂಬಂಧ, ತರಬೇತಿ ವೆಚ್ಚ, LRI ಎಕ್ಸ್ಟೆನ್ಷನ್ ಮ್ಯಾನೇಜರ್ ಸಿಬ್ಬಂದಿ ವೆಚ್ಚ ಹಾಗೂ LRI ಕಾರ್ಡ್ ಮುದ್ರಣ ವೆಚ್ಚ ಭರಿಸಲು ಕೆಳಕಂಡಂತೆ ಒಟ್ಟು ರೂ.98,00,000/- (ರೂ.ತೊಂಭತ್ತೆಂಟು ಲಕ್ಷ ಮಾತ್ರ) ಅನುದಾನವನ್ನು ಜಿಲ್ಲಾವಾರು ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಬಿಡುಗಡೆ ಮಾಡಲು ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ:2402-00-102-0-31 ಉಪ ಶೀರ್ಷಿಕೆ 051 ರಡಿ ಭರಿಸಲು ಅನುಮೋದಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಕಛೇರಿ ಆದೇಶ ಸಂಖ್ಯೆ:ಸುಜಲ-III/ನಿರ್ಗಮನ (Ext. Str.) ಕಾ.:ಯೋ.ಜಿ.:ಅನುದಾನ.ಬಿ.-1:2020-21, ದಿನಾಂಕ:16.09.2020**

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, 2020-21ನೇ ಸಾಲಿನಲ್ಲಿ ಸುಜಲ-III ಯೋಜನೆಯ ನಿರ್ಗಮನ (Exit Strategy) ಕಾರ್ಯಕ್ರಮದಡಿ ಒಂದು ದಿನದ ಗ್ರಾಮ ಮಟ್ಟದ ತರಬೇತಿಗಳ ಆಯೋಜನೆ, LRI ಎಕ್ಸ್ಟೆನ್ಷನ್ ಮ್ಯಾನೇಜರ್ ಸಿಬ್ಬಂದಿ ವೆಚ್ಚ ಹಾಗೂ LRI ಕಾರ್ಡ್ ಮುದ್ರಣ ವೆಚ್ಚ ಭರಿಸಲು ಕೆಳಕಂಡಂತೆ ಒಟ್ಟು ರೂ.98,00,000/- (ರೂ.ತೊಂಭತ್ತೆಂಟು ಲಕ್ಷ ಮಾತ್ರ) ಅನುದಾನವನ್ನು ಕೆಳಕಂಡಂತೆ ಜಿಲ್ಲಾವಾರು ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಲೆಕ್ಕ ಶೀರ್ಷಿಕೆ:2402-00-102-0-31 ಉಪ ಶೀರ್ಷಿಕೆ 051 ರಡಿ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರ.ಸಂ. | ಜಿಲ್ಲೆ ಹೆಸರು | ಬಿಡುಗಡೆ ಮಾಡಬೇಕಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 1 | ಬೀದರ್ | 10.00 |
| 2 | ಬಳ್ಳಾರಿ | 1.00 |
| 3 | ಚಾಮರಾಜನಗರ | 8.00 |
| 4 | ಚಿಕ್ಕಮಗಳೂರು | 6.00 |
| 5 | ದಾವಣಗೆರೆ | 5.00 |
| 6 | ಗದಗ | 10.00 |
| 7 | ಕಲಬುರಗಿ | 10.00 |
| 8 | ಕೊಪ್ಪಳ | 10.00 |
| 9 | ರಾಯಚೂರು | 10.00 |
| 10 | ತುಮಕೂರು | 10.00 |
| 11 | ವಿಜಯಪುರ | 10.00 |
| 12 | ಯಾದಗಿರಿ | 8.00 |
| | ಒಟ್ಟು ಮೊತ್ತ | 98.00 |
| | | (ಒಟ್ಟು ರೂ.ತೊಂಭತ್ತೆಂಟು ಲಕ್ಷ ಮಾತ್ರ) |

ಯೋಜನಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರು ನೀಡಲಾದ ಮಾರ್ಗಸೂಚಿಯಂತೆ ಕಾರ್ಯಚಟುವಟಿಕೆಗಳನ್ನು ಕೈಗೊಂಡು ಬಿಡುಗಡೆಯಾದ ಅನುದಾನವನ್ನು ಅನುಮೋದಿತ ಕಾರ್ಯಕ್ರಮಗಳಿಗೆ ಮಾತ್ರವೇ ಇಲಾಖಾ ಮಾರ್ಗಸೂಚಿ ಹಾಗೂ ಆರ್ಥಿಕ ನಿಯಮಗಳ ಅನ್ವಯ ವೆಚ್ಚವನ್ನು ಭರಿಸಿ ವೆಚ್ಚ ಪಟ್ಟಿಯನ್ನು ಇಲಾಖೆಗೆ ಸಲ್ಲಿಸುವುದು ಮತ್ತು ಮಾಡಿರುವ ವೆಚ್ಚಕ್ಕೆ ಅನುಗುಣವಾಗಿ ಲೆಕ್ಕಪತ್ರವನ್ನು ನಿರ್ವಹಿಸಿ ತಪಾಸಣೆಗೆ ಒದಗಿಸುವುದು. ಅನುಮೋದಿತ ಕಾರ್ಯಕ್ರಮಗಳನ್ನು ಹೊರತುಪಡಿಸಿ ಇತರೆ ಕಾರ್ಯಕ್ರಮ ಕೈಗೊಂಡಲ್ಲಿ ಸಂಬಂಧಿಸಿದವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ
ಬೆಂಗಳೂರು

**ಪ್ರತಿಗಳು:**

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
2. ಮುಖ್ಯಲೆಕ್ಕಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ತುಮಕೂರು / ಚಾಮರಾಜನಗರ / ಬೀದರ್ / ಕೊಪ್ಪಳ / ದಾವಣಗೆರೆ / ಕಲಬುರಗಿ / ಯಾದಗಿರಿ/ ಗದಗ / ವಿಜಯಪುರ / ರಾಯಚೂರು / ಚಿಕ್ಕಮಗಳೂರು / ಬಳ್ಳಾರಿ
4. ಜಂಟಿ ಕೃಷಿ ನಿರ್ದೇಶಕರು, ತುಮಕೂರು / ಚಾಮರಾಜನಗರ / ಬೀದರ್ / ಕೊಪ್ಪಳ / ದಾವಣಗೆರೆ / ಕಲಬುರಗಿ / ಯಾದಗಿರಿ/ ಗದಗ / ವಿಜಯಪುರ / ರಾಯಚೂರು / ಚಿಕ್ಕಮಗಳೂರು / ಬಳ್ಳಾರಿ, ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
5. ದಾಖಲೀಕರಣ ಮತ್ತು ಐ.ಜಿ.ಎ. ಪರಿಣಿತರು, ಸುಜಲ, ಜಅಇ ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
6. ಕಛೇರಿ ಪ್ರತಿ / ಆದೇಶದ ಕಡತಕ್ಕೆ.